# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,* ಮೈಸೂರು

*ಎಸ್‌ಸಿ.* 160/2022

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಸೆಲ್ವಂ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಅರ್ಪುದಸ್ವಾಮಿ | | **22.04.2025** |
| **ವಯಸ್ಸು** | ಃ **34** **ವರ್ಷ** | | |
| **ವೃತ್ತಿ** | ಃ ಮೀನುಗಾರಿಕೆ | **ಪ್ರಾ.ಸಾ.** ಃ | **18** |
| **ವಾಸಸ್ಥಳ** | ಃ ನಂಜನಗೂಡು | **ಚಾ.ಸಾ.** ಃ | **23** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಚಾ.ಸಾ–*24* ಆಂತೋಣಿ ನನ್ನ ಸೋದರ ಸಂಬಂಧಿ ಇರುತ್ತಾನೆ. ನಾನು ಮೀನು ಹಿಡಿಯುವ ಕೆಲಸ ಮಾಡುತ್ತೇನೆ. ಸಾಮಾನ್ಯವಾಗಿ ಯಾವುದಾದರೂ ಶವ ಕೆರೆ ಅಥವಾ ನದಿಯಲ್ಲಿ ಮುಳುಗಿದ್ದಲ್ಲಿ ನಾನು ಅದನ್ನು ಹುಡುಕುವ ಕೆಲಸವನ್ನು ಮಾಡುತ್ತೇನೆ. ಈಗ ಅಂದಾಜು ***3 ½*** ವರ್ಷಗಳ ಹಿಂದೆ ಕವಲಂದೆ ಪೋಲೀಸ್ ಠಾಣೆಯ ಪೊಲೀಸರು ಹಳೇಪುರ ಗ್ರಾಮದ ಕೆರೆಯಲ್ಲಿ ಒಬ್ಬ ವ್ಯಕ್ತಿ ಮುಳುಗಿದ್ದಾನೆ ಹುಡುಕಿಕೊಡಿ ಎಂದು ಹೇಳಿದಾಗ ನಾನು ಮತ್ತು ಚಾ.ಸಾ–*24* ಆ ಕೆರೆ ಬಳಿ ಹೋಗಿದ್ದೆವು. ಆ ಕೆರೆಯಲ್ಲಿ ಹುಡುಕಾಡಿ ಅಲ್ಲಿ ಮುಳುಗಿದ್ದ ಒಬ್ಬ ಬಾಲಕನ ಶವವನ್ನು ಹುಡುಕಿಕೊಟ್ಟಿದ್ದೆವು. ಆದರೆ ಆ ಬಾಲಕ ಯಾರು ಮತ್ತು ಯಾರ ಮಗ ಎಂದು ನನಗೆ ಗೊತ್ತಿಲ್ಲ. ಆ ಬಾಲಕ ನೀರಿನಲ್ಲಿ ಬಿದ್ದು ಸತ್ತು ಹೋಗಿದ್ದಾನೆ ಎಂದು ಗೊತ್ತಾಗಿತ್ತು. ಬೇರೆ ಯಾವ ಕಾರಣಕ್ಕೆ ಆ ಬಾಲಕ ಮರಣಹೊಂದಿದ್ದಾನೆ ಎಂದು ಗೊತ್ತಿಲ್ಲ. ಆ ಶವವನ್ನು

ಎತ್ತಿಕೊಟ್ಟ ಬಳಿಕ ನಾನು ವಾಪಸ್ಸು ಹೋಗಿದ್ದೆ. ಆ ಬಾಲಕನ ದೇಹದ ಮೇಲೆ ಯಾವುದೇ ಗಾಯಗಳು ಇರಲಿಲ್ಲ. ಈ ಬಗ್ಗೆ ಹೇಳಿಕೆ ಕೊಟ್ಟಿಲ್ಲ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

*2.* ಆ ದಿನ ನಾವು ಆ ಬಾಲಕನ ಶವ ತೆಗೆದಾಗ ಆತನ ಬಲ ಕಾಲಿಗೆ ಅಲ್ಲಲ್ಲಿ ತರಚಿದ ಗಾಯವಾಗಿದ್ದವು. ಎರಡು ಕಣ್ಣುಗಳು ಊದಿಕೊಂಡಿದ್ದವು ಮತ್ತು ಬಾಯಿ, ಮೂಗಿನಿಂದ ರಕ್ತ ಬರುತ್ತಿತ್ತು ಎಂದರೆ ನಾನು ನೋಡಿಲ್ಲ. ಮೃತ ಬಾಲಕನ ಕುಟುಂಬದ ಜನರು ಶ್ರೀನಿವಾಸ ಶೆಟ್ಟಿಯ ಮನೆಯವರು ಮಾಟ ಮಂತ್ರ ಮಾಡಿ ಸಾಯಿಸಿದ್ದಾರೆ ಎಂದು ಆ ಕಾಲಕ್ಕೆ ಗೋಳಾಡುತ್ತಿದ್ದರು ಎಂದರೆ ನಾನು ನೋಡಿಲ್ಲ. ಈ ಬಗ್ಗೆ ನಂತರ ಅವರ ಸಂಬಂಧಿಕರು ------- ಗೋಳಾಡುತ್ತಿದ್ದರು ಎಂದು ನಾನು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-*32* ಎಂದು ಗುರುತಿಸಿದೆ. ಆ ಬಗ್ಗೆ ಗೊತ್ತಿದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರವರಿಂದಃ- ಇಲ್ಲ

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು